ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-22/12015-16 ದಿನಾಂಕ: 21-07-2016

## ಸಿಇಟಿ-2016 – ಎರಡನೇ ಮುಂದುವರಿದ ಸುತ್ತಿನ ಪರಿಷ್ಕೃತ ವೇಳಾಪಟ್ಟಿ

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರು ದಿನಾಂಕ 21-07-2016ರ ರಂದು ಅಲ್ಪಸಂಖ್ಯಾತ ವೈದ್ಯಕೀಯ ಕಾಲೇಜುಗಳಲ್ಲಿ **351** ವೈದ್ಯಕೀಯ ಸೀಟುಗಳನ್ನು, ಡೀಮ್ಡ್ ಕಾಲೇಜುಗಳಿಂದ **155** ವೈದ್ಯಕೀಯ ಸೀಟುಗಳನ್ನು ಮತ್ತು **299** ದಂತವೈದ್ಯಕೀಯ ಸೀಟುಗಳನ್ನು ಹಂಚಿಕೆ ಮಾಡಲು ಪ್ರಾಧಿಕಾರಕ್ಕೆ ನೀಡಿರುತ್ತಾರೆ. ಹೊಸದಾಗಿ ಸೇರಿಸಲ್ಪಟ್ಟ ಈ ವೈದ್ಯಕೀಯ ಮತ್ತು ದಂತವೈದ್ಯಕೀಯ ಸೀಟುಗಳನ್ನು ಹಾಗು ಸಿಇಟಿ-2016ರ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ರದ್ದುಪಡಿಸಿಕೊಂಡಿರುವ / ಹೊಸದಾಗಿ ಸೇರಲ್ಪಟ್ಟ / ಉಳಿದಿರುವ ವೈದ್ಯಕೀಯ / ದಂತ ವೈದ್ಯಕೀಯ / ಇಂಜಿನಿಯರಿಂಗ್ / ಟೆಕ್ನಾಲಜಿ / ಆರ್ಕಿಟೆಕ್ಚರ್ ಹಾಗೂ *ಕೃಷಿ ವಿಜ್ಞಾನ / ತೋಟಗಾರಿಕೆ / ಪಶುಸಂಗೋಪನೆ / ಬಿ.ಫಾರ್ಮ್ ಇತ್ಯಾದಿ ಕೋರ್ಸುಗಳ ಸೀಟುಗಳು ಇದ್ದರೆ ಅಂತಹ ಸೀಟುಗಳನ್ನೂ ಸಹ ಎರಡನೇ ಮುಂದುವರಿದ ಸುತ್ತಿನಲ್ಲಿ ಹಂಚಿಕೆ ಮಾಡಲಾಗುವುದು.*

ಸಿಇಟಿ-2016ರ ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯನ್ನು ಈ ಕೆಳಗೆ ನೀಡಿರುವ ವೇಳಾಪಟ್ಟಿಯಂತೆ ನಡೆಸಲಾಗುವುದು. ಇಚ್ಛೆಯುಳ್ಳ ಅರ್ಹ ಅಭ್ಯರ್ಥಿಗಳು (ಮೊದಲನೇ ಸುತ್ತು ಅಥವಾ ಎರಡನೇ ಸುತ್ತಿನಲ್ಲಿ ಛಾಯ್ಸ್ 1 ಅನ್ನು ಆಯ್ಕೆ ಮಾಡಿ ಕಾಲೇಜಿನಲ್ಲಿ ಪ್ರವೇಶ ಪಡೆದವರು, ಸೀಟು ಹಂಚಿಕೆಯ ನಂತರ ಸೀಟುಗಳನ್ನು ರದ್ದುಪಡಿಸಿಕೊಂಡವರು ಮತ್ತು ಛಾಯ್ಸ್ 4 ಅನ್ನು ಆಯ್ಕೆ ಮಾಡಿದವರನ್ನು ಹೊರತು ಪಡಿಸಿ) ಎರಡನೇ ಮುಂದುವರಿದ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.

**ಸೂಚನೆ:**

1. ಈ ಸುತ್ತಿನಲ್ಲಿ ಅಭ್ಯರ್ಥಿಗಳಿಗೆ ಎಲ್ಲಾ ಕೋರ್ಸುಗಳಿಗೆ ಹೊಸದಾಗಿ ಇಚ್ಛೆ / ಆಯ್ಕೆ ಅನ್ನು ದಾಖಲಿಸಲು ಅವಕಾಶ ಕಲ್ಪಿಸಿದೆ. (Fresh Option Entry – Add / Delete / Modify / Re-order)
2. ಮೊದಲನೇ ಸುತ್ತಿನಲ್ಲಿ ಅಥವಾ ಎರಡನೇ ಸುತ್ತಿನಲ್ಲಿ ಪ್ರಾಧಿಕಾರದಿಂದ ಪಡೆದ ಸೀಟನ್ನು ರದ್ದುಪಡಿಸಿಕೊಳ್ಳಲು ಇಚ್ಛಿಸುವ ಅಭ್ಯರ್ಥಿಗಳು ಎರಡನೇ ಮುಂದುವರಿದ ಸುತ್ತಿನ ಆಯ್ಕೆ ದಾಖಲಿಸುವ ಕೊನೆಯ ದಿನಾಂಕದ ಒಳಗಾಗಿ ಅಂದರೆ before 1.00 pm on 25-07-2016 ಒಳಗಾಗಿ ರದ್ದುಪಡಿಸಿಕೊಳ್ಳಲು ಸೂಚಿಸಿದೆ. ಅಂತಹ ಅಭ್ಯರ್ಥಿಗಳಿಗೆ ಪಾವತಿಸಿದ ಮೊತ್ತದಲ್ಲಿ ನಿಯಮಾನುಸಾರ ರೂ.5,000/- ಅನ್ನು ಕಟಾವು ಮಾಡಿ ಉಳಿದ ಮೊತ್ತವನ್ನು ಹಿಂದಿರುಗಿಸಲಾಗುವುದು.
3. ಅಭ್ಯರ್ಥಿಗಳು ಮೊದಲನೇ ಸುತ್ತಿನಲ್ಲಿ ಅಥವಾ ಎರಡನೇ ಸುತ್ತಿನಲ್ಲಿ ಹಂಚಿಕೆಯಾಗಿರುವ ಸೀಟನ್ನು ದಿನಾಂಕ 25–07–2016 ಮ.1.00 ಗಂಟೆಯ ನಂತರ ರದ್ದುಪಡಿಸಿಕೊಂಡರೆ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ನಿಯಮನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
4. ಅಭ್ಯರ್ಥಿಗಳು ಎರಡನೇ ಮುಂದುವರಿದ ಸುತ್ತಿನಲ್ಲಿ ಹಂಚಿಕೆಯಾಗುವ ಸೀಟನ್ನು ರದ್ದುಪಡಿಸಿಕೊಂಡರೆ ಸಂದಾಯ ಮಾಡಿರುವ ಪೂರ್ತಿ ಶುಲ್ಕವನ್ನು ನಿಯಮನುಸಾರ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
5. ಸಿಇಟಿ-2016 ರ ಬ್ರೋಚರನಲ್ಲಿ ನೀಡಿರುವ ಇತರೆ ಮಾರ್ಗದರ್ಶನಗಳು ಮತ್ತು ಕಾರ್ಯವಿಧಾನಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

| Sl. No. | Particulars | Date and Time |
|---|---|---|
| 01 | Display of Seat Matrix | 21-07-2016 after 8.00 pm |
| 02 | Option Entry by Eligible Candidates (Read CET-2016 Brochure (Pages 90-93) for Details) | From 10.00 am on 22-07-2016 to 25-07-2016 up to 2.00 pm |
| 03 | Publication of Seat Allotment of Second Extended Round | 26-07-2016 by 6.00 pm |
| 04 | Confirmation of Allotment, Payment of Fees and Downloading of Admission Order and reporting to colleges | 27-07-2016 to 28-07-2016 |
| 05 | Last date for reporting to college | 29-07-2016 Before 5.30 pm |

### ಎರಡನೇ ಮುಂದುವರಿದ ಸುತ್ತಿನ ಸೀಟು ಹಂಚಿಕೆಯ ನಂತರದ ಸೂಚನೆಗಳು

1. ಎರಡನೇ ಮುಂದುವರಿದ ಸುತ್ತಿನಲ್ಲಿ ಅಭ್ಯರ್ಥಿಗಳು ಕೇವಲ ಛಾಯ್ಸ್ 1 ಅನ್ನು ಆಯ್ಕೆ ಮಾಡಿಕೊಂಡು ಕಾಲೇಜಿಗೆ ಪ್ರವೇಶ ಪಡೆಯಬೇಕು ಮತ್ತು ಸೀಟು ಹಂಚಿಕೆಯ ಬಗ್ಗೆ ಬೇರೆ ಯಾವುದೇ ಇತರೆ ಛಾಯ್ಸ್ ಇರುವುದಿಲ್ಲ.
2. ಎರಡನೇ ಮುಂದುವರಿದ ಸುತ್ತಿನಲ್ಲಿ ಹಂಚಿಕೆಯಾದ ಸೀಟಿಗೆ ಶುಲ್ಕವನ್ನು ಪಾವತಿಸಿ (ಪಾವತಿಸಿದೇ ಇದ್ದಲ್ಲಿ) ನಿಗದಿತ ಕೊನೆಯ ದಿನಾಂಕದೊಳಗೆ ಹಂಚಿಕೆಯಾದ ಕಾಲೇಜಿಗೆ ಪ್ರವೇಶ ಪಡೆಯಬೇಕು ಮತ್ತು ಪ್ರವೇಶ ಪಡೆದ ನಂತರ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರವೇಶ ಪಡೆದಿರುವ ಬಗ್ಗೆ ದಾಖಲಿಸಬೇಕು.

ಸಹಿ/-

ಆಡಳಿತಾಧಿಕಾರಿ.

No. ED/KEA/ADMN/CR-22/2015-16 Date: 21-07-2016

## CET-2016 – Second Extended Round Revised Schedule

On 21-07-2016, Director, Medical Education has issued seat matrix for **351** Medical seats in Minority Colleges, **155** Medical seats in Deemed Colleges and **299** Dental seats for allotment of seats in Second Round Seat Allotment. Along with these newly added Medical and Dental seats, the Medical / Dental, Engineering, Farm Science, Horticulture, Veterinary B-Pharm etc seats which are surrendered / forfeited / newly added if any will also be offered in this second extended round seat allotment.

The Second Extended Round seat allotment for CET-2016 will be conducted as per the schedule given below. The interested eligible candidates (except those who have exercised Choice 1 in First Round or Choice 1 in Second Round and reported to the college, candidates who have cancelled the allotted seats and Choice 4 Candidates) can participate in this round.

**NOTE:**

1. In this round candidates are allowed to enter options afresh. (Fresh Option Entry – Add / Delete / Modify / Re-order)
2. The candidates who wish to surrender the KEA seat selected in First round or in the Second round, they can cancel the seat before the last day for entry of options in the second extended round i.e., before 1.00 pm on 25-07-2016 and they are entitled to get a refund of fee amount after deducting Rs.5,000/- from the paid amount.
3. The candidates who have selected seat in First round or in the Second round and surrenders the seat after 1.00 p.m. on 25-07-2016, for such candidates entire amount paid by the candidates will be forfeited as per rules.
4. The candidate who surrenders the seat allotted in the Second Extended Round, for such candidates, entire amount paid by the candidates will be forfeited as per rules.
5. All other guidelines and procedures given in the CET-2016 brochure remain same for all other purposes.

| Sl. No. | Particulars | Date and Time |
|---|---|---|
| 01 | Display of Seat Matrix | 21-07-2016 after 8.00 pm |
| 02 | Option Entry by Eligible Candidates (Read CET-2016 Brochure (Pages 90-93) for Details) | From 10.00 am on 22-07-2016 to 25-07-2016 up to 2.00 pm |
| 03 | Publication of Seat Allotment of Second Extended Round | 26-07-2016 by 6.00 pm |
| 04 | Confirmation of Allotment, Payment of Fees and Downloading of Admission Order and reporting to colleges | 27-07-2016 to 28-07-2016 |
| 05 | Last date for reporting to college | 29-07-2016 Before 5.30 pm |

### Post allotment Procedure

1. In this Second Extended Round candidates will have only one choice i.e., Choice-1 and report to the colleges and they will not have any other choices to exercise in Second Extended Round.
2. Candidates who have allotted seat in any discipline are required to pay the prescribed fees (if not paid) and should compulsorily report to the colleges on or before the last date mentioned in the admission order and should update the details through their log-In-Id to KEA or they lose their allotted seats.

Sd/-
Administrative Officer.